ಆ) ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು ಪ್ರವಾಸೋದ್ಯಮ ನೀತಿಯನ್ನು ಜಾರಿಗೆ ತರಲಾಗಿದೆ. ಈ ನೀತಿಯಂತೆ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ನಿರ್ಮಿಸಲು ಮುಂದೆ ಬರುವ ಖಾಸಗಿ ಉದ್ಯಮಿದಾರರಿಗೆ ಪ್ರೋತ್ಸಾಹ ನೀಡಲಾಗುವುದು. ಈ ನೀತಿಯನ್ವಯ ಉದ್ದಿಮೆದಾರರು ನಗದು ಸಬ್ಸಿಡಿ, ಮಾರಾಟ ತೆರಿಗೆಯಲ್ಲಿ ವಿನಾಯ್ತಿ, ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿ, ನೋಂದಣಿ ಶುಲ್ಕ ಮತ್ತು ಸ್ಟ್ಯಾಂಪ್ ಶುಲ್ಕದಲ್ಲಿ ರಿಯಾಯಿತಿ ಪಡೆಯುತ್ತಾರೆ. ಅಲ್ಲದೆ ಇಲಾಖೆ ಮತಿಯಿಂದ ಕೇಂದ್ರ ಹಣ ಸಹಾಯದಿಂದ ಯಾತ್ರಿ ನಿವಾಸ್, ರಸ್ತೆ ಬದಿ ಸೌಲಭ್ಯ, ಪ್ರವಾಸಿ ಸಂಕೀರ್ಣ, ಸುಲಭ್ ಶೌಚಾಲಯಗಳನ್ನು ನಿರ್ಮಿಸಲಾಗುವುದು. ಪ್ರವಾಸಿ ಸ್ಥಳಗಳ ಬಗ್ಗೆ ಮಾಹಿತಿಯುಳ್ಳ ವರ್ಣ ರಂಜಿತ ಮಡಿಕೆಗಳನ್ನು ಮುದ್ರಿಸಿ ಪ್ರವಾಸಿಗರಿಗೆ ವಿತರಿಸಲಾಗುತ್ತಿದೆ.

ನ್ಯಾಯಾಧೀಶರುಗಳ ವಸತಿ ಗೃಹಗಳು

1458 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನ್ಯಾಯಾಧೀಶರುಗಳ ವಸತಿಗೃಹಗಳ ಸಂಖ್ಯೆ ಎಷ್ಟು?

ಆ) ಇನ್ನೂ ಎಷ್ಟು ವಸತಿಗೃಹಗಳ ಅವಶ್ಯಕತೆ ಇದೆ?

ಇ) ಅವುಗಳನ್ನು ರಚಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 1. ನ್ಯಾಯಾಂಗ ಇಲಾಖೆ ನಿರ್ಮಿಸಿದ ವಸತಿ ಗೃಹಗಳು 148

2. ಸರ್ಕಾರ : ಇತರೇ ಇಲಾಖೆಗಳ ನಾಮ ನಿರ್ದೇಶಿತ ವಸತಿ ಗೃಹಗಳು 130

3. ನಾಮ ನಿರ್ದೇಶಿತವಲ್ಲದ ಇತರೆ ಇಲಾಖೆಗಳ ವಸತಿ ಗೃಹಗಳು 69

ಆ) 307

ಇ) ಎ.224 ವಸತಿ ಗೃಹಗಳನ್ನು ಬೆಂಗಳೂರಿನ ಕೋರಮಂಗಲದಲ್ಲಿ ಜ್ಯುಡಿಷಿಯಲ್ ಅಧಿಕಾರಿಗಳಿಗೆ ನಿರ್ಮಿಸಲಾಗುತ್ತಿದೆ

ಬಿ. 131 ವಸತಿಗೃಹಗಳ ನಿರ್ಮಾಣವು ವಿವಿಧ ಹಂತಗಳಲ್ಲಿದೆ.

ಸಿ. 1996-97ನೇ ಸಾಲಿನ ಆಯವ್ಯಯದಲ್ಲಿ 650 ಲಕ್ಷ ರೂ.ಗಳ ಅನುದಾನ ಒದಗಿಸಿದೆ.

ಮುನ್ಸೀಫ್ ಕೋರ್ಟ್ ಹೊಸ ಕಟ್ಟಡ ಕೆಲಸ ಪ್ರಾರಂಭಿಸುವ ಬಗ್ಗೆ

2603 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಟಿ. ನರಸೀಪುರದ ಮುನ್ಸಿಫ್ ಕೋರ್ಟಿನ ಹೊಸ ಕಟ್ಟಡದ ಕೆಲಸವು ಯಾವಾಗ ಪ್ರಾರಂಭವಾಯಿತು? ಅದರ ಅಂದಾಜು ಎಷ್ಟು;*

ಆ) *1996-97ನೇ ಸಾಲಿನಲ್ಲಿ ಕಟ್ಟಡಕ್ಕೆ ಕೊಟ್ಟಿರುವ ಹಣವೆಷ್ಟು? ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ; ಸದರಿ ಕಟ್ಟಡದ ಕೆಲಸ ಎಲ್ಲಿಯವರೆಗೆ ನಡೆದಿರುತ್ತದೆ?*

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) 1) 01.06.1992 ರಂದು ಪ್ರಾರಂಭವಾಯಿತು.

2) ಅಂದಾಜು ವೆಚ್ಚ - 50.00 ಲಕ್ಷ ರೂ.ಗಳು

3) ಪರಿಷ್ಕರಿಸಿದ ಅಂದಾಜು ವೆಚ್ಚ - 54.00 ಲಕ್ಷ ರೂ.ಗಳು

ಆ) 1) 1996-97ನೇ ಸಾಲಿನಲ್ಲಿ 4.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

2) 18.00 ಲಕ್ಷ ರೂ.ಗಳು ಬೇಕಾಗುವುದೆಂದು ಅಂದಾಜಿಸಲಾಗಿದೆ.

3) ಕೆಲಸವು ಪೂರ್ಣಗೊಳ್ಳುವ ಹಂತದಲ್ಲಿದೆ.

ಅಬಕಾರಿ ಇಲಾಖೆಯ ಬಾಡಿಗೆ ಕಟ್ಟಡಗಳ ಕಛೇರಿಗಳು

2356 - ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮಂಗಳೂರಿನಲ್ಲಿ ಅಬಕಾರಿ ಇಲಾಖೆಯ ಎಷ್ಟು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ತಿಂಗಳಿಗೆ ಎಷ್ಟು ಬಾಡಿಗೆ ಸಂದಾಯವಾಗುತ್ತಿದೆ.*

ಆ) *ಮಂಗಳೂರು ಮೇರಿಹಿಲ್ ನಲ್ಲಿರುವ ಸ್ವಂತ ಕಟ್ಟಡವನ್ನು ಅಭಿವೃದ್ಧಿ ಪಡಿಸಿದರೆ ಎಲ್ಲಾ ಕಛೇರಿಗಳನ್ನು ಒಂದೇ ಕಡೆ ನಡೆಸಲು ಸಾಧ್ಯವಿಲ್ಲವೇ?*

ಇ) *ಹಾಗಿದ್ದಲ್ಲಿ, ಕಟ್ಟಡವನ್ನು ಅಭಿವೃದ್ಧಿಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಕೆ.ಬಿ. ಶಾಣಪ್ಪ (ಅಬಕಾರಿ ಸಚಿವರು) :

ಅ) ಮಂಗಳೂರಿನಲ್ಲಿ ಅಬಕಾರಿ ಇಲಾಖೆಯ ಏಳು ಕಛೇರಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಇವುಗಳಿಗೆ ಮಾಸಿಕ ರೂ. 15,430-00 ಗಳು ಬಾಡಿಗೆ ರೂಪದಲ್ಲಿ ಸಂದಾಯವಾಗುತ್ತಿದೆ.

ಆ) ಸಾಧ್ಯವಿದೆ

ಇ) ಕಟ್ಟಡದ ನೆಲ ಅಂತಸ್ತು ಹಾಗೂ ಎರಡು ಅಂತಸ್ತುಗಳ ನಿರ್ಮಾಣಕ್ಕೆ ರಾಜ್ಯದ ಮುಖ್ಯ ವಾಸ್ತುಶಿಲ್ಪಜ್ಞರಿಂದ ನಕಾಶೆಯು ಅಂಗೀಕೃತವಾಗಿರುತ್ತದೆ. ಕಟ್ಟಡದ ನಿರ್ಮಾಣವನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ. ನೆಲ ಅಂತಸ್ತಿನ ಕಟ್ಟಡವನ್ನು ರೂ. 18,55,210-00 ಗಳ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ. ಮೊದಲ ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಬೇಕಾದ ರೂ. 26.50 ಲಕ್ಷಗಳ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಕುರಿತು ಪರಿಶೀಲನೆಯಲ್ಲಿದೆ.